ಡಾ. ಹೆಚ್.ಡಿ. ಲವಾಣಿ.—ಮಂಡಲ ಪ್ರಧಾನರಿಗೆ ಪತ್ರ ಹಚ್ಚಿಯೆಂದು ಆದೇಶ ಕೊಡುತ್ತಿದ್ದಾರೆ ಅವರು ಮತ್ತೆ ಚುನಾವಣೆಗೆ ಹೋಗಬೇಕು. ಅವರಿಗೆ ಬೇರೆ ಬೇರೆ ರಾಜಕೀಯ ಪ್ರಭಾವಗಳು ಬರುತ್ತವೆ ಆದ್ದರಿಂದ ಅವರು ರದ್ದು ಮಾಡುವುದಕ್ಕಾಗುವುದಿಲ್ಲ. ಸಧ್ಯದಲ್ಲಿ ಇದಕ್ಕೆ ಬೇರೆ ದಾರಿಯನ್ನು ಹುಡುಕ ಬೇಕಾಗುತ್ತದೆ. ಈ ಹಸಿರು ಕಾರ್ಡ್‌ಗಳನ್ನು ರವಿನೂ ಡಿಪಾರ್ಟ್‌ಮೆಂಟ್‌ನವರು ಕೊಟ್ಟಿದ್ದಾರೆ. ಆದ್ದರಿಂದ ಅವರೇ ಕ್ಯಾನ್ಸಲ್ ಮಾಡಬೇಕಾಗುತ್ತದೆ. ಈ ರೀತಿಯಲ್ಲಿ ಏನಾದರು ಕಾರ್ಯಕ್ರಮವನ್ನು ಹಾಕಿಕೊಳ್ಳಲಿಕ್ಕೆ ಸಾಧ್ಯವಿದೆಯೆ ?

ಶ್ರೀ ಕೆ.ಜೆ. ಜಾರ್ಜ್.—ಮಾನ್ಯ ಸದಸ್ಯರ ಸಲಹೆಯನ್ನು ಪರಿಶೀಲನೆ ಮಾಡಿ ಕ್ರಮ ತೆಗೆದು ಕೊಳ್ಳುತ್ತೇನೆ.

ಶ್ರೀ ಡಿ.ಎ. ಚಿನ್ನಪ್ಪ.—ಕಾರ್ಡ್‌ಗಳನ್ನು ಕೊಡುವಾಗ ಈ ಹಿಂದೆ ಶಿಫಾರಸ್ಸಿನಿಂದ ಯಾರ್ಯಾರಿಗೊ ಕೊಟ್ಟಿದ್ದಾರೆ. ಕಾರ್ಡ್‌ಗಳನ್ನು ವಿತರಣೆ ಮಾಡುವಂತಹ ಕೆಲಸವನ್ನು ಯಾರಾದರೂ ಅಧಿಕಾರಿಗಳಿಗೆ ವಹಿಸಬೇಕು ಅಧಿಕಾರಿಗಳು ಕೊಡುವ ವ್ಯವಸ್ಥೆ ಮಾಡಿದರೆ ತಹಶೀಲ್ದಾರ್ ಅಥವಾ ಬ್ಲಾಕ್ ಡೆವಲಪ್ ಮೆಂಟ್ ಆಫೀಸರ್‌ಗಳಿಗೆ ವಹಿಸಿ. ೨ ಎಕರೆ ೫ ಎಕರೆ ೫ ಎಕರೆ ತೋಟ ಗದ್ದೆ ಇರುವವರಿಗೆ ಕಾರ್ಡ್‌ಗಳನ್ನು ಕೊಟ್ಟಿದ್ದು ಉಂಟು. ಕಾರ್ಡ್‌ಗಳನ್ನು ವಾಪಸ್ಸು ತೆಗೆದುಕೊಂಡು ಪುನಃ ವಾಪಸ್ಸು ಅವರಿಗೆ ಕೊಟ್ಟಿದ್ದಾರೆ. ಇದನ್ನು ತಪ್ಪಿಸಲಿಕ್ಕೆ ಬಿ.ಡಿ.ಒ. ಅಥವಾ ತಹಶೀಲ್ದಾರ್‌ಗಳಿಗೆ ಅಧಿಕಾರವನ್ನು ಕೊಟ್ಟರೆ ಸಮಸ್ಯೆ ಪರಿಹಾರ ಆಗುತ್ತದೆ.

ಶ್ರೀ ಕೆ.ಜೆ. ಜಾರ್ಜ್.—ನಾನು ಈಗಾಗಲೇ ಇದಕ್ಕೆ ಉತ್ತರ ಕೊಟ್ಟಿದ್ದೇನೆ.

ಆಹಾರ ಧಾನ್ಯಗಳ ಸಾಗಾಣಿಕೆ ನಿರ್ಬಂಧದ ಬಗ್ಗೆ

ಶಿರಿಶಿ. ಪ್ರೊ. ಎಂ. ಡಿ. ನಂಜುಂಡಸ್ವಾಮಿ (ಧಾರವಾಡ ಗ್ರಾಮಾಂತರ).—ಮಾನ್ಯ ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಧಾನ್ಯ ಸಾಗಾಣಿಕೆ ನಿರ್ಬಂಧದಿಂದ ಸರ್ಕಾರಕ್ಕೆ ಇರುವ ಅನುಕೂಲಗಳೇನು ?

ಆ) ಈ ನಿರ್ಬಂಧದಿಂದ ಸರ್ಕಾರಕ್ಕೆ ಪ್ರಯೋಜನವಾಗಿದೆಯೇ ?

ಶ್ರೀ ಕೆ.ಜೆ. ಜಾರ್ಜ್ (ಆಹಾರ ಮತ್ತು ಸಾರಿಗೆ ರಾಜ್ಯ ಸಚಿವರು).—

ಅ) ರಾಜ್ಯದೊಳಗೆ ಭತ್ತ ಸಾಗಾಣಿಕೆಗೆ ಯಾವುದೇ ನಿರ್ಬಂಧವಿರುವುದಿಲ್ಲ. ಆದರೆ, ಕರ್ನಾಟಕ ಅಕ್ಕಿ ಸಂಗ್ರಹಣೆ (ಲೆವಿ) ಆದೇಶ ೧೯೭೪ರ ಪ್ರಕಾರ ಭತ್ತದ ಅಂತರ ರಾಜ್ಯ ಸಾಗಾಣಿಕೆ ನಿರ್ಬಂಧವಿರುತ್ತದೆ ಲೆವಿ ಆದೇಶದ ಪ್ರಕಾರ ಮಿಲ್ಲರ್ಸ್ : ವ್ಯಾಪಾರಿಗಾರರು ಶೇ. ೩೩ ೧/೩ ರಷ್ಟು ಅಕ್ಕಿಯನ್ನು ಕೇಂದ್ರ ಸರ್ಕಾರ ನಿಗದಿಪಡಿಸಿರುವ ಗುಣಮಟ್ಟದಲ್ಲಿ ಲೆವಿಯಾಗಿ ನೀಡಿ ಉಳಿಕೆ ಶೇ. ೬೬ ೨/೩ ರಷ್ಟು ಅಕ್ಕಿಯನ್ನು ಜಿಲ್ಲಾಧಿಕಾರಿಗಳಿಂದ ಲೀಸ್ ಸರ್ಟಿಫಿಕೇಟನ್ನು ಹಾಗೂ ತಹಶೀಲ್ದಾರರಿಂದ ಸಾಗಾಣಿಕೆ ಪತ್ರವನ್ನು ಪಡೆದು ಯಾವುದೇ ಸ್ಥಳಕ್ಕೆ ಬೇಕಾದರೂ ಸಾಗಾಣಿಕೆ ಮಾಡಬಹುದಾಗಿದೆ. ಇದರಿಂದ ಕೇಂದ್ರ ಸರ್ಕಾರವು ನಿಗದಿಪಡಿಸಿರುವ ಲೆವಿ ಅಕ್ಕಿ ಸಂಗ್ರಹಣೆಗೆ ಉಪಯೋಗವಾಗುತ್ತದೆ. ಈ ಅಕ್ಕಿಯನ್ನು ಭಾರತ ಆಹಾರ ನಿಗಮವು ರಾಜ್ಯದಲ್ಲಿ ಸಾರ್ವಜನಿಕ ವಿತರಣಾ ವ್ಯವಸ್ಥೆಯ ವಿತರಣೆಗೆ ಹಂಚಿಕೆ ಮಾಡುತ್ತದೆ.

ಆ) ಹೌದು.

ಪ್ರೊ :ಎಂ. ಡಿ. ನಂಜುಂಡಸ್ವಾಮಿ.— Karnataka Rise Procurement (Levy) Order, 1984 ರ ಅದರ ಪ್ರಕಾರ ಅಂತರರಾಜ್ಯ ಸಾಗಾಣಿಕೆ ನಿರ್ಬಂಧವನ್ನು ಭತ್ತಕ್ಕೆ ಹಾಕಿದ್ದೀವೆಂದು ಮಾನ್ಯ ಸಚಿವರು ಹೇಳುತ್ತಿದ್ದಾರೆ. ಹೋದವರ್ಷ ಕೇಂದ್ರದಲ್ಲಿ ಕಾಂಗ್ರೆಸ್ ಸರ್ಕಾರವಿದ್ದಾಗ, ಭತ್ತಕ್ಕೆ ಅಂತರರಾಜ್ಯ ನಿರ್ಬಂಧವನ್ನು ರದ್ದು ಮಾಡಿತ್ತು ಎನ್ನುವ ವಿಚಾರವನ್ನು ಸಚಿವರ ಗಮನಕ್ಕೆ ತರುತಾ ಅದನ್ನು ವಿತಕ್ಕೆ ರದ್ದು ಮಾಡಿತ್ತು ಎನ್ನುವುದಕ್ಕೆ ಕಾರಣ ಹೇಳಬೇಕಾಗಿದೆ. ನಮ್ಮ ಸಂವಿಧಾನದ ಆರ್ಟಿಕಲ್ ೩೧೧ರ ಪ್ರಕಾರ ವ್ಯಕ್ತಿ ಸ್ವಾತಂತ್ರ್ಯ ಈ ದೇಶದ ಎಲ್ಲಾ ಪ್ರಜೆಗಳಿಗೂ ಇರುವ ರೀತಿಯಲ್ಲಿ ರೈತರಿಗೂ ಇದೆ ಎನ್ನುವುದನ್ನು ರಾಜೀವ್‌ಗಾಂಧಿಯವರಿಗೆ ನಾವು ಮನದಟ್ಟು ಮಾಡಿಕೊಟ್ಟ ಮೇಲೆ ನಂತರರಾಜ್ಯ ಸಾಗಾಣಿಕೆ ನಿರ್ಬಂಧವನ್ನು ರದ್ದು ಮಾಡಲಾಗಿದೆ ಆದರೂ ನಿಮ್ಮ ಸರ್ಕಾರ ವಿತ್ತಕ್ಕೆ ಮುಂದುವರಿಸುತ್ತಿದೆ? ಎರಡನೆಯದಾಗಿ ಇದರಿಂದ ಎನು ಪ್ರಯೋಜನವಿದೆ ಎನ್ನುವ ಬಗ್ಗೆ ಸಚಿವರು ಏನು ಉತ್ತರ ಕೊಟ್ಟಿದ್ದಾರೆಂದರೆ,೩೩ ೧/೩ರಷ್ಟು ಅಕ್ಕಿ(ಲೆವಿ)ಸಂಗ್ರಹಣೆ ಮಾಡಲಿಕ್ಕೆ ಈ ಕಾರ್ಯಕ್ರಮ ಸಹಾಯವಾಗುತ್ತಿದೆ ಎಂದು ಹೇಳಿದ್ದಾರೆ. ಅದು ಒಂದು ಅನುಕೂಲ. ನೀವು ರೈಸ್‌ಮಿಲ್ ಮಾಲೀಕರಿಂದ

ಲೆವಿ ಅಕ್ಕಿಯನ್ನು ತೆಗೆದುಕೊಳ್ಳುತ್ತಿದ್ದೀರಿ. ರೈತರ ಚಳುವಳಿಯಿಂದ ನಿಮಗೆ ರೈತರಿಂದ ತೆಗೆದ ಕೊಳ್ಳಲಿಕ್ಕೆ ಸಾಧ್ಯವಾಗಲಿಲ್ಲ. ಈಗ ನಿಮಗೆ ಲೆವಿ ಅಕ್ಕಿ ಸಿಗುತ್ತಿದೆ. ಅದಂ ಬಿಟ್ಟರೆ ಇನ್ನು ಏನೂ ನಿಮಗೆ ಪ್ರಯೋಜನವಿಲ್ಲ. ನೀವು ಅಂತರರಾಜ್ಯ ಸಾಗಾಣಿಕೆಯನ್ನು ನಿಲ್ಲಿಸಿದರೂ ಭ್ರಷ್ಟಾಚಾರದ ಮೂಲಕ ಸಾಗಾಣಿಕೆ ನಡೆಯುತ್ತಿದೆ. ಈ ನಿಮ್ಮ ನಿರ್ಬಂಧ ಯಾವ ಪ್ರಯೋಜನಕ್ಕೂ ಬಂದಿಲ್ಲ. ಈ ನಿರ್ಬಂಧದ ಕಾನೂನಿನಿಂದ ರೈತರಿಗೆ ಬೆಲೆಯಲ್ಲಿ ಬಹಳ ಮೋಸವಾಗಿದೆ. ನಾನು ಸಚಿವರಿಗೆ ಕೇಳುತ್ತಿದ್ದೇನೆ ಯಾವುದೇ ಪ್ರಯೋಜನವಿಲ್ಲದೆ, ಅಕ್ಕಿಯನ್ನು ಸಂಗ್ರಹಣ ಮಾಡಲಿಕ್ಕೆ ಈ ಕಾನೂನು ಇರುವುದರಿಂದ, ನಿಮಗೆ ಈಗ ಲೆವಿ ಅಕ್ಕಿಯಂ ಸಹ ಮಿಲ್ ಮಾಲೀಕರಿಂದ ಸಿಗುತ್ತಾ ಇದೆ. ಈ ಸಾಗಾಣಿಕೆ ನಿರ್ಬಂಧವನ್ನು ರಾಜೀವ್‌ಗಾಂಧಿಯವರು ಹಾಕಿಕೊಟ್ಟ ಮಾರ್ಗದರ್ಶನದಂತೆ ನೀವು ಸಹ ಈ ನಿರ್ಬಂಧವನ್ನು ರದ್ದು ಮಾಡುತ್ತೀರಾ?

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ಮಾನ್ಯ ಸದಸ್ಯರು ಪ್ರಶ್ನೆ ಕೇಳಿದರೆ ಉತ್ತರ ಹೇಳುತ್ತೇನೆ. ಈ ತರಹ ಕೇಳಿದರೆ ಉತ್ತರ ಕೊಡುವುದು ಕಷ್ಟವಾಗುತ್ತದೆ. ಭತ್ತದ ಅಂತರರಾಜ್ಯ ನಿರ್ಬಂಧವನು ಈಗ ಹೊರತುಪಡಿಸಿದ್ದಾರೆ. ಲೆವಿ ಅಕ್ಕಿ ಸಂಗ್ರಹ ಮಾಡಬೇಕೆಂದು ಕೇಂದ್ರ ಸರ್ಕಾರದ ಆದೇಶವಿದೆ. ಯಾರಂ ಮಿಲ್ ವಾಲೀಕರು ಇದ್ದಾರೆ ಮತ್ತು ಟ್ರೇಡರ್ಸ್ ಇದ್ದಾರೆ, ಅವರಿಂದ ಸುಮಾರು ೧/೩ರಷ್ಟು ಲೆವಿ ಸಂಗ್ರಹ ಮಾಡುತ್ತಿದ್ದೇವೆ, ಅವರು ಲೆವಿ ಕೊಟ್ಟ ಮೇಲೆ ಅವರಿಗೆ ಕ್ಲಿಯರೆನ್ಸ್ ಸರ್ಟಿಫಿಕೇಟ್ ಕೊಡುತ್ತೇವೆ. ಆ ಅಕ್ಕಿಯನ್ನು ಅವರು ಅಂತರರಾಜ್ಯ ಮಟ್ಟದಲ್ಲಿ ತೆಗೆದುಕೊಂಡು ಹೋಗುವುದಕ್ಕೆ ಯಾವ ನಿರ್ಬಂಧವೂ ಇಲ್ಲ. ಆದರೆ ಲೆವಿ ಕೊಡದೆ ಅಂತರರಾಜ್ಯ ಮಟ್ಟದಲ್ಲಿ ತೆಗೆದುಕೊಂಡು ಹೋಗಲಿಕ್ಕೆ ನಾವು ಕಂಟ್ರೋಲ್‌ನ್ನು ಹಾಕಿದ್ದೇವೆ. ಇದರಿಂದ ಎರಡು ಪ್ರಯೋಜನ ಆಗುತ್ತದೆ. ಒಂದು, ನಮ್ಮ ಪೈಸ್ ಅನ್ನು ಕಂಟ್ರೋಲ್‌ನಲ್ಲಿ ಇಟ್ಟುಕೊಳ್ಳುವುದಕ್ಕೆ ಸಾಧ್ಯವಾಗುತ್ತದೆ. ಮತ್ತು ಕೇಂದ್ರಸರ್ಕಾರದವರು ನೀಡಿರುವಂಥ ಲೆವಿ ಸಂಗ್ರಹ ಮಾಡುವುದಕ್ಕೆ ಇದರಿಂದ ಪ್ರಯೋಜನ ಆಗುತ್ತದೆ.

ಪ್ರೊ: ಎಂ.ಡಿ. ನಂಜುಂಡಸ್ವಾಮಿ,— ನೀವು ಸಾಗಾಣಿಕೆ ನಿರ್ಬಂಧವನ್ನು ಮಿಲ್ ಮಾಲೀಕರಿಗೆ ಹಾಕಿ, ನಮ್ಮದು ಅಡ್ಡಿ ಇಲ್ಲ. ಏಕೆಂದರೆ ನಿಮಗೆ ಲೆವಿ ಹೆಚ್ಚು ಬೇಕು. ಆದರೆ ರೈತರ ಮೇಲೆ ಸಾಗಾಣಿಕೆ ನಿರ್ಬಂಧವನ್ನು ಹಾಕುತ್ತಿದ್ದೀರಲ್ಲ, ಅದು ಸಂವಿಧಾನಕ್ಕೆ ವಿರುದ್ಧವಾದುದು, ಆದ್ದರಿಂದ ಇದನ್ನು ರದ್ದು ಮಾಡುತ್ತೀರಾ ಎಂದು ನಾನು ಕೇಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ನಮ್ಮ ರಾಜ್ಯದಲ್ಲಿ ರೈತರಾಗಲೀ ಮಿಲ್ಲರ್‌ರಾಗಲೀ. ಭತ್ತವನ್ನು ಆ ಕಡೆಯಿಂದ ಈ ಕಡೆ ಅಂತರರಾಜ್ಯ ಮಟ್ಟದಲ್ಲಿ ತರುವುದಕ್ಕೆ ಮಾಡುವುದಕ್ಕೆ ನಾವು ಯಾವುದೇ ನಿರ್ಬಂಧವನ್ನು ಹಾಕಿಲ್ಲ. ಬರೇ ಅಕ್ಕಿಗೆಮಾತ್ರ ನಿರ್ಬಂಧನ್ನು ಹಾಕಿದ್ದೇವೆ. ಆದ್ದರಿಂದ ಇದರಿಂದ ಹೆಚ್ಚಿಗೆ ರೈತರಿಗೆ ಏನೂ ತೊಂದರೆಯಾಗುವುದಿಲ್ಲ,

ಶ್ರೀ ಬಿ.ಎಂ. ಇದಿನಬ್ಬ.— ಅಧ್ಯಕ್ಷರೇ, ಈ ಧಾನ್ಯ ಸಾಗಾಣಿಕೆ ಈ ನಿರ್ಬಂಧದಿಂದ ಬಹಳವಾಗಿ ಉಪಕಾರವಾಗುವುದಿದ್ದರೆ ಬಹಳ ಸಂತೋಷ. ಆದರೆ ನಮ್ಮ ಜಿಲ್ಲೆಯಲ್ಲಿ, ಕೇರಳಕ್ಕೆ ಹೋಗುವ ಗಡಿ ಪ್ರದೇಶದಲ್ಲಿ ವಿಟ್ಲದ ಸಮೀಪ ಉಕ್ಕುಡ ನನ್ನ ಕ್ಷೇತ್ರದ ತಳಪಾಡಿಯಲ್ಲಿ ಭ್ರಷ್ಟಾಚಾರದಿಂದ ಕೆಲವು ವೇಳೆ ಹೋಗುವುದು ಉಂಟು. ನಾನು ಹೇಳುವುದು, ಈ ನಿಬಂರ್ಧ ಜಯಪ್ರದ ಆಗಬೇಕಾದರೆ ತಡೆ ಇರತಕ್ಕಂಥ ಜಾಗದಲ್ಲಿ ಒಳ್ಳೆಯ ಅಧಿಕಾರಿಗಳನ್ನು ಹಾಕಿ ತಪಾಸಣೆ ಮಾಡಿ, ಯಾರೂ ಸಹ ತೆಗೆದು ಕೊಂಡು ಹೋಗದ ಹಾಗೆ ನೋಡತಕ್ಕಂಥ ವ್ಯವಸ್ಥೆ ಮಾಡದೇ ಹೋದರೆ ಭ್ರಷ್ಟಾಚಾರದಲ್ಲಿ ಅಥವಾ ಕಳ್ಳಸಾಗಾಣಿಕೆಯಲ್ಲಿ ತೆಗೆದುಕೊಂಡು ಹೋಗುತ್ತಿರುತ್ತಾರೆ. ಇದಕ್ಕೆ ಏನಾದರೂ ಕಟ್ಟುನಿಟ್ಟಿನ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಕೆ.ಜೆ. ಜಾರ್ಜ್ — ಅಧ್ಯಕ್ಷರೇ, ಈಗಾಗಲೇ ನಮ್ಮ ಫುಡ್ ಸೆಲ್‌ನಲ್ಲಿ ಡಿ.ಐ.ಜಿಯವರಂ ತುಂಬ ಧಕ್ಷರಾದವರು ಇದ್ದಾರೆ. ಅವರು ಸಾಕಷ್ಟು ಕ್ರಮವನ್ನು ತೆಗೆದುಕೊಳ್ಳುತ್ತಿದ್ದಾರೆ. ಮಾನ್ಯ ಸದಸ್ಯರು ಹೇಳಿದ ಹಾಗೆ ಆ ಗಡಿಯಲ್ಲಿ ಇಂತಹ ಲಂಚದ ಪ್ರಶ್ನೆಗಳು ಇರುವುದು ಈಗ ನನ್ನ ಗಮನಕ್ಕೆ ಬಂದಿದೆ, ಈ ವಿಚಾರದಲ್ಲಿ ಸೂಕ್ತ ಕ್ರಮ ತೆಗೆದುಕೊಳ್ಳುವುದಕ್ಕೆ ಆದೇಶವನ್ನು ಕೊಡುತ್ತೇನೆ.

ಶ್ರೀ ವಿನಯಕುಮಾರ್ ಸೊರಕೆ.— ಕೆಲವೊಂದು ಅಂತರರಾಜ್ಯ ಗಡಿಪ್ರದೇಶಗಳಲ್ಲಿ ಬೆಲ್ಟ್ ಏರಿಯಾ ಅಂತ ನೀವು ಡಿಕ್ಲೇರ್ ಮಾಡಿದ್ದೀರಿ, ಕೇರಳ ಗಡಿಪ್ರದೇಶದಲ್ಲಿ ಕೆಲವು ಗ್ರಾಮಗಳಿಗೆ ಯಾವುದೇ ರೀತಿಯ ಆಹಾರ ಧಾನ್ಯಗಳನ್ನು ಸಾಗಾಣಿಕೆ ಮಾಡುವುದಕ್ಕೆ ಸಾಧ್ಯವಾಗುವುದಿಲ್ಲ. ಉದಾಹರಣೆಗೆ ನನ್ನ ಕ್ಷೇತ್ರವಾದ ಮತ್ತೂರಿನ ಗಡಿ ಪ್ರದೇಶದಲ್ಲಿ ಕೇರಳ ರಾಜ್ಯ ಕೂಡ ಬರುತ್ತದೆ. ಬೆಲ್ಟ್ ಏರಿಯಾ ಎಂದು ಡಿಕ್ಲೇರ್ ಮಾಡಿದ ಪ್ರದೇಶದಲ್ಲಿ ನಿಜವಾಗಿಯೂ ಅಲ್ಲಿಯ ಜನರಿಗೆ ಬೇಕಾದಂಥ

ಆಹಾರಧಾನ್ಯಗಳನ್ನು ಕೊಂಡೊಯ್ಯುವುದಕ್ಕೆ ಅಧಿಕಾರಿಗಳು ಅಡ್ಡಿ ಮಾಡುತ್ತಿದ್ದಾರೆ. ಆದರೆ ಬೇರೆ ರೀತಿಯಲ್ಲಿ ಅವ್ಯವಹಾರ ಇದೆ. ಸ್ಮಗ್ಲಿಂಗ್ ನಡೆಯುತ್ತಿದೆ. ಅದನ್ನು ಹಿಡಿಯುವುದಕ್ಕೆ ಆಗುವುದಿಲ್ಲ. ಆದರೆ ನಿಜವಾಗಿಯೂ ಅಗತ್ಯವಾದ ಆಹಾರಧಾನ್ಯಗಳನ್ನು ಕೊಂಡೊಯ್ಯಲು ತೊಂದರೆಯಾಗದಂತೆ ಕ್ರಮ ಕೈಗೊಳ್ಳಬೇಕು. ಇದರಿಂದ ಅಲ್ಲಿಯ ಜನರಿಗೆ ಒಹಳ ತೊಂದರೆಯಾಗಿದೆ. ಇದನ್ನು ಪರಿಹರಿಸ ಬೇಕೆಂದು ಮಾನ್ಯ ಅಧ್ಯಕ್ಷರ ಮೂಲಕ ಮಾನ್ಯ ಮಂತ್ರಿಗಳನ್ನು ಕೇಳಿಕೊಳ್ಳುತ್ತೇನೆ.

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ ಈ ತರಹ ಗಡಿ ಪ್ರದೇಶಗಳ ಜನರಿಗೆ ಏನಾದರೂ ತೊಂದರೆಯಾಗುತ್ತಿದ್ದರೆ ಅದನ್ನು ಸರಿಪಡಿಸುವುದಕ್ಕೆ ಸೂಕ್ತ ಕ್ರಮ ತೆಗೆದುಕೊಳ್ಳುತ್ತೇನೆ.

ಶ್ರೀಮತಿ ದಮಯಂತಿ ಬೋರೇಗೌಡ.— ಈ ಭತ್ತದ ಸಾಗಾಣಿಕೆ ಮೇಲೆ ನಿರ್ಬಂಧ ಇಲ್ಲ. ಆದರೆ ಅಕ್ಕಿ ಸಾಗಾಣಿಕೆ ಮೇಲೆ ಹೆಚ್ಚಿನ ನಿರ್ಬಂಧ ವಿಧಿಸುತ್ತಿದ್ದಾರೆ. ಇದರಿಂದ ನಮ್ಮ ರೈತರಿಗೆ ಒಹಳ ತೊಂದರೆಯಾಗುತ್ತಿದೆ. ಹಾಗೆಯೇ ಮಿಲ್ ಮಾಲೀಕರಿಗೆ ಕೂಡ ತೊಂದರೆಯಾಗುತ್ತಿದೆ. ಭತ್ತಕ್ಕೆ ಮತ್ತು ಅಕ್ಕಿಗೆ ಏಕೆ ಈ ವ್ಯತ್ಯಾಸ ಮಾಡುತ್ತೀರಿ?

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ನಾವು ಮಿಲ್ ಪಾಯಿಂಟ್‌ನಲ್ಲಿ ಲೆವಿ ಕಲೆಕ್ಟ್ ಮಾಡುತ್ತಿದ್ದೇವೆ. ಆದ್ದರಿಂದ ಅಕ್ಕಿ ವೇಲೆ ನಿರ್ಬಂಧ ಮಾಡುತ್ತಿದ್ದೇವೆ. ಬೇರೆ ಜಿಲ್ಲೆಗಳಿಂದ ಉದಾಹರಣೆಗೆ ರಾಯಚೂರಿನಿಂದ ಮಂಡ್ಯದಿಂದ ಭತ್ತವನ್ನು ತೆಗೆದುಕೊಂಡು ಬಂದು ಹಲ್ ಮಾಡುವುದಕ್ಕೆ ನಮ್ಮ ಅಭ್ಯಂತರ ಇಲ್ಲ. ಎಲ್ಲೆಲ್ಲಿ ಹಲ್ ಆಗುತ್ತದೆಯೋ ಅಲ್ಲಿ ನಮಗೆ ೧/೩ ಲೆವಿ ಕೊಡಬೇಕು, ಮತ್ತೆ ಬೇರೆ ರಾಜ್ಯಗಳಿಗೆ ಹೋಲಿಸಿದರೆ ಪಂಜಾಬ್‌ನಲ್ಲಿ ೨/೩ ಲೆವಿ ಕೊಡಬೇಕಾಗುತ್ತದೆ. ನಮ್ಮಲ್ಲಿ ಲೆವಿಯನ್ನು ಕಡಿಮೆ ಮಾಡಿದ್ದೇವೆ. ಕೇಂದ್ರ ಸರ್ಕಾರದವರು ಏನು ಹೇಳಿದ್ದಾರೆ, ಅದರ ಪ್ರಕಾರ ನಾವು ನಡೆದುಕೊಳ್ಳಬೇಕಾಗುತ್ತದೆ. ಆದ್ದರಿಂದ ರೈತರಾಗಲೀ, ಮಿಲ್ ಮಾಲೀಕರಿಗಾಗಲೀ ತೊಂದರೆ ಕೊಡುವ ಯಾವುದೇ ಉದ್ದೇಶ ಇಲ್ಲ.

ಶ್ರೀ ಜಿ. ರಾಜಗೌಡ.— ಸ್ವಾಮಿ ಮಿಲ್ ಪಾಯಿಂಟ್‌ನಲ್ಲಿ ಲೆವಿ ಕಲೆಕ್ಟ್ ಮಾಡುತ್ತಿದ್ದೀರಿ ಮಿಲ್ ಪಾಯಿಂಟ್‌ನಲ್ಲಿ ಲೆವಿ ಕೊಟ್ಟು ಉಳಿದ ಅಕ್ಕಿಯನ್ನು ಹೊರಗೆ ತೆಗೆದುಕೊಂಡು ಹೋಗಬೇಕಾದರೆ ಆವಾಗ ನಿರ್ಬಂಧವನ್ನು ಸಡಿಲ ಮಾಡುತ್ತೀರಾ ಎಂಬುದನ್ನು ದಯವಿಟ್ಟು ತಿಳಿಸಬೇಕು.

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ಯಾರು ಮಿಲ್‌ಪಾಯಿಂಟ್ ಲೆವಿ ಕೊಡುತ್ತಾರೆ. ಅವರಿಗೆ ತಕ್ಷಣವೇ ರಿಲೀಸ್ ಸರ್ಟಿಫಿಕೇಟ್ ಕೊಡುವಂಥ ಆದೇಶವನ್ನು ಈಗಾಗಲೇ ಕೊಟ್ಟಿದ್ದೇವೆ. ಮಿಲ್ ಪಾಯಿಂಗ್ ಲೆವಿ ಇಷ್ಟು ಎಂದು ನಿಗದಿ ಮಾಡಿದ್ದೇವೆ, ಅದರ ಪ್ರಕಾರ ಕೊಟ್ಟರೆ. ಆಗಲೇ ರಿಲೀಸ್ ಸರ್ಟಿಫಿಕೇಟ್ ಕೊಡುವುದಕ್ಕೆ ಈಗಾಗಲೇ ಆದೇಶ ಕೊಟ್ಟಿದ್ದೇವೆ.

ಶ್ರೀ ಡಿ.ಎ. ಚಿನ್ನಪ್ಪ.— ಕೊಡಗು ಮಿಲ್ ಮಾಲೀಕರಿಂದ ಲೆವಿ ಕಲೆಕ್ಟ್ ಮಾಡುತ್ತಾ ಇಲ್ಲ. ಅವರು ಶಿವಮೊಗ್ಗ ಅಥವಾ ಹಾಸನ ಜಿಲ್ಲೆ ಅಥವಾ ಮಂಡ್ಯ ಜಿಲ್ಲೆಗೆ ಬಂದು ಭತ್ತವನ್ನು ಖರೀದಿ ಮಾಡಿದರೆ ಅದಕ್ಕೂ ಲೆವಿ ಲೆಕ್ಕ ಕೊಡಬೇಕಾಗುತ್ತದೆ. ಆದರೆ ಕೊಡಗಿನ ಭತ್ತವನ್ನು ಏಕೆ ಲೆವಿಯಾಗಿ ತೆಗೆದುಕೊಳ್ಳುವುದಿಲ್ಲವೆಂದು ತಮ್ಮ ಮೂಲಕ ಮಂತ್ರಿಗಳನ್ನು ಕೇಳುತ್ತೇನೆ.

ಶ್ರೀ ಕೆ. ಜೆ. ಜಾರ್ಜ್.— ಕೆಲವೊಂದು ಸರಿದರ್ಭದಲ್ಲಿ ಕೆಲವು ಜಿಲ್ಲೆಯವರಂ ಆ ಜಿಲ್ಲೆಯ ಮತ್ತು ಬೇರೆ ಜಿಲ್ಲೆಯಲ್ಲಿ ಭತ್ತವನ್ನು ಪಡೆದು. ಆದರಲ್ಲಿ ಲೆವಿಯನ್ನು ಸರಂಡರ್ ಮಾಡುತ್ತಿದ್ದಾರೆ. ಅದೇ ರೀತಿಯಲ್ಲಿ ಕೊಡಗಿನಲ್ಲಿ ಸಹಿತ ಕೆಲವೊಂದು ಸಲ ಈ ರೀತಿಯಾಗುತ್ತದೆ.

ಪ್ರೊ: ಎಂ. ನಂಜುಂಡಸ್ವಾಮಿ.— ಮಾನ್ಯ ಮಂತ್ರಿಗಳು ಕೇವಲ ಭತ್ತಕ್ಕೆ ಮಾತ್ರ ಸಾಗಾಣಿಕೆ ನಿರ್ಬಂಧ ಹಾಕಿದ್ದೇವೆ ರೈತ ಬೆಳೆದ ಬೇರೆ ವಸ್ತುಗಳಿಗೆ ಹಾಕಿಲ್ಲ ಎಂದು ಹೇಳಿದ್ದಾರೆ. ಇದನ್ನು ಸ್ವಲ್ಪ ತನಿಖೆ ಮಾಡಿನೋಡಬೇಕು. ಇವತ್ತು ಶೇಂಗಾ ಸೂರ್ಯಕಾಂತಿ ಹತ್ತಿ ಇವುಗಳಿಗೂ ಸಾಗಾಣಿಕೆ ನಿರ್ಬಂಧ ಇದೆ. ನೀವು ಇದರ ಬಗ್ಗೆ ಆದೇಶ ಕೊಟ್ಟಿದ್ದೀರೋ ಇಲ್ಲವೋ ಗೊತ್ತಿಲ್ಲ ಆದರೆ ಸಾಗಾಣಿಕೆ ನಿರ್ಬಂಧ ವಾಗುತ್ತಿದೆ. ಇದರಿಂದ ರೈತರಿಗೆ ಸಿಗಬೇಕಾದ ಮುಕ್ತಮಾರುಕಟ್ಟೆಯ ಲಾಭ ಸಿಗುತ್ತಾ ಇಲ್ಲ. ಬೇರೆ ಯಾವುದೇ ವಸ್ತುಗಳಿಗೂ ಇಂಡಿಯಾ ದೇಶದಲ್ಲಿ ಎಲ್ಲಿ ಬೇಕಾದರೂ ಸಾಗಿಸುವುದಕ್ಕೆ ಸ್ವಾತಂತ್ರ್ಯ ಇದೆ. ಆದರೆ ರೈತ ಬೆಳೆದ ಮಾಲಿಗೆ ಮಾತ್ರ ಸ್ವಾತಂತ್ರ್ಯ ಇಲ್ಲ. ಆದ್ದರಿಂದ ಸಂವಿಧಾನದತ್ತವಾದಂತಹ ಸಾಗಾಣಿಕೆ ಸ್ವಾತಂತ್ರ್ಯ ರೈತನಿಗೂ ಸಿಗಬೇಕು. ಈ ದಿಕ್ಕಿನಲ್ಲಿ ಏನಾದರೂ ಕಾನೂನು ಮಾಡುತ್ತೀರಾ?

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ಭತ್ತ ಮತ್ತು ಅಕ್ಕಿ ವಿಚಾರ ಮಾತನಾಡಿದ್ದೇನೆ. ಬೇರೆ ವಿಚಾರ ಮಾತನಾಡಿಲ್ಲ. ಇದಕ್ಕೆ ಪ್ರತ್ಯೇಕ ಪ್ರಶ್ನೆ ಹಾಕಿದರೆ ಅದಕ್ಕೆ ಉತ್ತರ ಕೊಡುತ್ತೇನೆ.

ಶ್ರೀ ಬಿ.ಎಸ್. ಯಡಿಯೂರಪ್ಪ,— ಮಾನ್ಯ ಅಧ್ಯಕ್ಷರೇ, ಭತ್ತವನ್ನಾದರೂ ಲೆವಿ ರೂಪದಲ್ಲಿ ತೆಗೆದುಕೊಳ್ಳಲಿ, ಅಕ್ಕಿಯನ್ನಾದರೂ ಲೆವಿ ರೂಪದಲ್ಲಿ ತೆಗೆದುಕೊಳ್ಳಲಿ. ಈ ಸುಗ್ಗಿ ಸಂದರ್ಭದಲ್ಲಿ ಲೆವಿ ರೂಪದಲ್ಲಿ ಕಡಿಮೆ ದರದಲ್ಲಿ ತೆಗೆದುಕೊಳ್ಳುವುದರಿಂದ ಅಲ್ಪಿಮೆಟಾಗಿ ಭತ್ತ ಬೆಳೆದಂಥ ರೈತನ ಮೇಲೆ ಆ ಲುಂಕ್ಸಾನು ಬೀಳುತ್ತದೆ. ಇದನ್ನು ಯಾವುದೇ ಮಿಲ್ ಮಾಲೀಕ ಭರಿಸುವ ಪ್ರಶ್ನೆ ಇಲ್ಲ. ಈ ರೀತಿಯ ಲೆವಿಯ ನೀತಿಯಿಂದ ರೈತ ಬೀದಿ ಪಾಲಾಗುತ್ತಾನೆ. ಅವನಿಗೆ ಸರಿಯಾದ ಬೆಲೆ ಸಿಕುತ್ತಾ ಇಲ್ಲ. ಈ ಲೆವಿಯಿಂದ ಪಸೂಲ್ಮಾಡುವ ಅಕ್ಕಿ ಬೆಲೆಗೂ ಮಾರ್ಕೆಟ್ ಬೆಲೆಗೂ ಸುಮಾರು ೧೫೦ರೂಪಾಯಿಗಳ ವ್ಯತ್ಯಾಸ ಇರುವುದರಿಂದ ರೈತನ ಮೇಲೆ ಅದರ ಕೆಟ್ಟ ಪರಿಣಾಮವಾಗುವುದಿಲ್ಲವೇ? ಇದು ರೈತ ವಿರೋಧಿ ನೀತಿಯಾಗುವುದಿಲ್ಲವೇ, ಇದರಿಂದ ರೈತನ ಶೋಷಣೆಯಾಗುವುದಿಲ್ಲವೇ?

ಶ್ರೀ ಕೆ.ಜೆ. ಜಾರ್ಜ್.— ಅಧ್ಯಕ್ಷರೇ, ಲೆವಿ ನೀತಿ ಅಥವಾ ಅದರ ದರವನ್ನು ಕೇಂದ್ರ ಸರ್ಕಾರದವರು ನಿಗದಿ ಮಾಡುತ್ತಾರೆ. ಆದ್ದರಿಂದ ಮಾನ್ಯ ಸದಸ್ಯರು ಹೇಳಿದ ಸಲಹೆಯನ್ನು ಕೇಂದ್ರದವರ ಗಮನಕ್ಕೆ ತರುತ್ತೇವೆ.

ಶ್ರೀ ಬಿ. ಹೆಚ್. ಬನ್ನಿಕೋಡ್.— ಅಧ್ಯಕ್ಷರೇ, ರೈತರಿಂದ ಲೆವಿ ತೆಗೆದುಕೊಳ್ಳುವುದು, ಮಿಲ್ಲಿನ ಮಾಲೀಕರಿಂದ ಲೆವಿ ತೆಗೆದುಕೊಳ್ಳುವುದು, ಈ ಎರಡರಿಂದಲೂ ರೈತರ ಮೇಲೆ ಭಾರ ಬೀಳುತ್ತದೆ. ಬಜಾರ್‌ನಲ್ಲಿ, ರೈತ ಬೆಳೆದ ಮಾಲಿಗೆ ಕಡಿಮೆ ಬೆಲೆ ಇರುವುದರಿಂದ ಸರ್ಕಾರ ಅದಕ್ಕಿಂತ ಅರ್ಧದಷ್ಟು ಕಡಿಮೆ ಬೆಲೆಯನ್ನು ಕೊಟ್ಟು, ರೈತರಿಂದ ಲೆವಿ ವಸೂಲಿ ಮಾಡುವುದರಿಂದ ರೈತನಿಗೆ ನ್ಯಾಯವಾಗಿ ಸಿಗಬೇಕಾದ ಬೆಲೆ ಸಿಕ್ಕದಂತೆ ಆಗಿದೆ, ಈ ರೀತಿ ಮಾಡುವುದಕ್ಕೆ ಯಾವುದೇ ಸರ್ಕಾರಕ್ಕೆ ನೈತಿಕ ಹಕ್ಕು ಇಲ್ಲ, ರೈತ ಬೆಳೆದ ಮಾಲಿಗೆ ಯೋಗ್ಯ ಬೆಲೆ ಕೊಡುವಂಥದ್ದನ್ನು ಯಾವ ಸರ್ಕಾರವೂ ಈ ದೇಶದಲ್ಲಿ ಮಾಡಿಲ್ಲ. ಆದ್ದರಿಂದ ಮುಂಕ್ತ ಬಜಾರಿನಲ್ಲಿ ಸರ್ಕಾರದ ಮಾಲನ್ನು ಕೊಂಡು, ಕಡಿಮೆ ದರದಲ್ಲಿ ಹಿಸಿರು ಕಾರ್ಡ್‌ನವರಿಗೆ ಹಂಚಬೇಕು. ರೈತರಿಂದ ಕಡಿಮೆ ಬೆಲೆಗೆ ಕೊಂಡುಕೊಳ್ಳುವುದರಿಂದ ರೈತರ ಶೋಷಣೆಯಾಗುತ್ತದೆ. ಆದ್ದರಿಂದ ಈ ಲೆವಿ ಪದ್ಧತಿಯನ್ನು ನಿಲ್ಲಿಸುವುದಕ್ಕೆ ಸರ್ಕಾರ ಯೋಚನೆ ಮಾಡುತ್ತದೆಯೇ ಎಂದು ಕೇಳಬಯಸುತ್ತೇನೆ?

ಶ್ರೀ ಕೆ.ಜೆ. ಜಾರ್ಜ್.— ಈಗಾಗಲೇ ಉತ್ತರ ಕೊಟ್ಟಿದ್ದೇನೆ. ಇದು ಕೇಂದ್ರ ಸರ್ಕಾರದವರ ನೀತಿ ಮತ್ತು ದರವನ್ನೂ ಸಹಿತ ಕೇಂದ್ರಸರ್ಕಾರ ನಿಗದಿ ಮಾಡುತ್ತದೆ. ಆದ್ದರಿಂದ ಅವರ ಸಲಹೆಯನ್ನು ಕೇಂದ್ರ ಸರ್ಕಾರದವರ ಗಮನಕ್ಕೆ ತರುತ್ತೇನೆ.

ತೆರಿಗೆಗಳ ಬಾಕಿಗಳು

೪೩೧. ಶ್ರೀ ಆರ್. ಎನ್. ನಾಯ್ಕ (ಹೊನ್ನಾವರ).—ಮಾನ್ಯ ಕಾನೂನು ಮತ್ತು ಸಂಸದೀಯ ವ್ಯವಹಾರಗಳು, ಯೋಜನೆ, ವಾರ್ತೆ ಮತ್ತು ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ರಾಜ್ಯದಲ್ಲಿ ೧೯೮೯-೯೦ನೇ ಸಾಲಿಗೆ ವಿವಿಧ ರೀತಿಯಿಂದ ಎಷ್ಟು ಮೊತ್ತದ ಕರಾಕರಣೆಯು ಗುರಿ ಇಟ್ಟುಕೊಳ್ಳಲಾಗಿತ್ತು ?

ಆ) ಗುರಿ ತಲುಪಿದೆಯೇ ?

ಇ) ಅಬಕಾರಿ ಇಲಾಖೆಯಿಂದ ಎಷ್ಟು ಕರಾಕರಣೆ ಆಗಬೇಕಾದದ್ದು ಬಾಕಿ ಇದೆ ?

(ಗುತ್ತಿಗೆದಾರರ ಪಟ್ಟಿ ನೀಡುವುದು)

ಶ್ರೀ ಎಂ. ವೀರಪ್ಪ ಮೊಯಿಲಿ (ಕಾನೂನು, ಸಂಸದೀಯ ವ್ಯವಹಾರಗಳು ಯೋಜನೆ, ವಾರ್ತೆ ಮಂತ್ರಿಗಳು).—

ಅ) ಪರಿಷ್ಕೃತ ಆಧಾಯವಿರುವುದರಿಂದ ಅಬಕಾರಿ ಇಲಾಖೆಗೆ ೩೧ನೇ ಮಾರ್ಚಿ ೧೯೯೦ಕ್ಕೆ ಒಟ್ಟು ೩೨೦ ಕೋಟಿ ರೂ.ಗಳು ವಸೂಲಿಯಾಗುವುದೆಂದು ಅಂದಾಜು ಮಾಡಲಾಗಿದೆ.

ಆ) ೧೯೯೦ನೇ ಫೆಬ್ರುವರಿ ಅಂತ್ಯದವರೆಗೆ ೨೯೧ ಕೋಟಿ ರೂ.ಗಳ ವಸೂಲಿಯು ಗುರಿಯನ್ನು ಸಾಧಿಸಲಾಗಿದೆ.

ಇ) ಗುತ್ತಿಗೆಯ ಬಾಡಿಗೆಗಳಲ್ಲಿ ಕಡಿಮೆ ಬೀಳುವುದಿದ್ದಲ್ಲಿ ಅದು ೧೯೮೯-೯೦ನೇ ಸಾಲಿನ ಅಬಕಾರಿ ವರ್ಷವು ಮುಗಿದಮೇಲೆ ತಿಳಿದುಬರುತ್ತದೆ, (ಆದ್ದರಿಂದ ಈ ಹಂತದಲ್ಲಿ ಅಂತಹ ಬಾಡಿಗೆದಾರರ ಪಟ್ಟಿಯನ್ನು ಸಲ್ಲಿಸುವ ಪ್ರಶ್ನೆ ಉದ್ಭವಿಸುವುದಿಲ್ಲ.)